3. ವಿಷಯ : ಡಿಪ್ಲೊಮಾ ಕಾಲೇಜಿಗೆ ಸರ್ಕಾರಿ ಜಾಗವನ್ನು ಒದಗಿಸಿ ಕೊಡುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) : ಡಿಪ್ಲೊಮಾ ಕಾಲೇಜ್‌ಗೆ ಎಂದು ನಾವು ಜಾಗ ಕೇಳಿದ್ದೆವು. ಅದನ್ನು ಕಂದಾಯ ಇಲಾಖೆಯವರು ಕೊಡುತ್ತಿಲ್ಲ. ಪ್ರತಿ ಹಂತದಲ್ಲಿಯೂ ಕೂಡ ಸರ್ಕಾರಿ ಡಿಪ್ಲೊಮಾ ಕಾಲೇಜ್‌ಗೆ ಜಾಗ ಕೇಳಿದರೆ, ಅದನ್ನು ಕೊಡದೇ ಇರತಕ್ಕಂಥ ಸಂದರ್ಭದಲ್ಲಿ ಆ ಜಾಗವನ್ನು ಡಿಪ್ಲೊಮಾ ಕಾಲೇಜಿಗೆ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ, ಲೋಕೋಪಯೋಗಿ ಸಚಿವರು (ಉಪಮುಖ್ಯ ಮಂತ್ರಿಯವರ ಪರವಾಗಿ) : ಡಿಪ್ಲೊಮಾ ಕಾಲೇಜಿಗೆ ಸರ್ಕಾರಿ ಭೂಮಿ ಕೊಡುವ ಬಗ್ಗೆ ಕೇಳಿದ್ದಾರೆ. ಅಲ್ಲಿ ಸರ್ಕಾರಿ ಜಮೀನು ಲಭ್ಯವಿದ್ದರೆ ಅದನ್ನು ಕೊಡಿಸುವಂತಹ ಕೆಲಸವನ್ನು ಮಾನ್ಯ ಕಂದಾಯ ಸಚಿವರಿಗೆ ಹೇಳಿ ಮಾಡಿಸಿಕೊಡುವಂತಹ ಪ್ರಯತ್ನ ಮಾಡುತ್ತೇನೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ : ಮಾನ್ಯ ಅಧ್ಯಕ್ಷರೆ, ಡಿ.ಸಿ. ಆಫೀಸ್‌ನಿಂದ ಕಳುಹಿಸಿದರೂ ಕೂಡ, Regional Commissioner office ನಲ್ಲಿ ಕೊಕ್ಕೆಗಳನ್ನು ಹಾಕಿ ಯಾವ್ಯಾವುದೋ ಕಾರಣಗಳ ನೆಪವೊಡ್ಡಿ ವಾಪಸ್ಸು ಕಳುಹಿಸುತ್ತಿದ್ದಾರೆ. ದಯಮಾಡಿ ಅದನ್ನು ತರಿಸಿಕೊಂಡು ಸರ್ಕಾರದ ಮಟ್ಟದಲ್ಲಿ ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಮತ್ತೆ ಮನವಿ ಮಾಡುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಬೇಡಿಕೆಯನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಈಡೇರಿಸುವಂತಹ ಕೆಲಸ ಮಾಡುತ್ತೇನೆ.

4. ವಿಷಯ : ಅಗ್ನಿಶಾಮಕ ಕಟ್ಟಡ ಪೂರ್ಣಗೊಳಿಸುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) : ನಮ್ಮ ಕ್ಷೇತ್ರದಲ್ಲಿ ಒಂದು ಅಗ್ನಿಶಾಮಕ ಕಟ್ಟಡ ಇದೆ. ಇದು ಅರ್ಧಂಬರ್ಧ ಆಗಿದೆ. ಬಹಳಷ್ಟು

ಒತ್ತಾಯ ಹಾಗೂ ಮನವಿಯನ್ನು ಮಾಡಿದರೂ ಕೂಡ, ಕಟ್ಟಡಕ್ಕೆ ಅನುದಾನ ಕೊಡಲಿಲ್ಲ. ಜೊತೆಗೆ ಅದನ್ನು complete ಮಾಡದೇ ಅರ್ಧಂಬರ್ಧ ಮಾಡಿ ನಿಲ್ಲಿಸಿದ್ದಾರೆ. ದಯಮಾಡಿ ಕಟ್ಟಡವನ್ನು ಪೂರ್ಣಗೊಳಿಸಲಿಕ್ಕೆ ಸುಮಾರು 1.25 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಈ ಮುಖಾಂತರ ಮನವಿ ಮಾಡುವುದರೊಂದಿಗೆ ಅದನ್ನು ಮಾಡಿಕೊಡ ಬೇಕೆಂದು ಮಾನ್ಯ ಗೃಹ ಸಚಿವರ ಗಮನಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ, ಲೋಕೋಪಯೋಗಿ ಸಚಿವರು (ಮಾನ್ಯ ಗೃಹ ಸಚಿವರು ಪರವಾಗಿ) : ಮಾನ್ಯ ಅಧ್ಯಕ್ಷರೆ,

ಹೊಸದುರ್ಗ ಪಟ್ಟಣದಲ್ಲಿ ದಿನಾಂಕ: 06–10–2001 ರಿಂದ ತಾತ್ಕಾಲಿಕ ಕಟ್ಟಡದಲ್ಲಿ ಅಗ್ನಿಶಾಮಕ ಠಾಣೆಯು ಕಾರ್ಯನಿರ್ವಹಿಸುತ್ತಿದೆ. ಖಾಯಂ ಅಗ್ನಿಶಾಮಕ ಠಾಣೆಯ ಕಟ್ಟಡವನ್ನು ಲೋಕೋಪಯೋಗಿ ಇಲಾಖೆ ಯವರು 2005–06ನೇ ಸಾಲಿನಲ್ಲಿ ನೀಡಿರುವ ರೂ.25 ಲಕ್ಷಗಳ ಅನುದಾನವನ್ನು ಬಳಸಿ ಇಲಾಖೆಯ ಟೈಪ್ ಡಿಸೈನ್ ಪ್ರಕಾರ ಕಟ್ಟಡ ನಿರ್ಮಾಣ ಪ್ರಾರಂಭಿಸಿ ಕಛೇರಿ ಕಟ್ಟಡ ನೆಲ ಅಂತಸ್ತನ್ನು ಹಾಗೂ ಮೂರು ಗ್ಯಾರೇಜ್‌ಗಳನ್ನು ನಿರ್ಮಿಸಲಾಗಿದೆ. ಈ ಕಟ್ಟಡವನ್ನು ಬಳಸಲು ವಿದ್ಯುತ್ ಸೌಲಭ್ಯ, ನೆಲಹಾಸು ಕಲ್ಲುಗಳು, ಗ್ಯಾರೇಜ್ ಮತ್ತು ಸ್ಯಾನಿಟೇಷನ್ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿದ್ದು, ಈ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆ ರೂ.12 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಕೋರಿದ್ದಾರೆ. ಈ ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಇನ್ನು ನಾಲ್ಕು ತಿಂಗಳುಗಳ ಕಾಲದಲ್ಲಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಅಗ್ನಿಶಾಮಕ ಠಾಣೆಯನ್ನು ಸ್ಥಳಾಂತರಿಸಲಾಗುವುದು.

ಮಾನ್ಯ ಸದಸ್ಯರು ಮಾತನಾಡುವಾಗ, ಒಂದು ಕೋಟಿ ರೂಪಾಯಿ ಗಿಂತಲೂ ಹೆಚ್ಚಿನ ಹಣ ಬೇಕಾಗುತ್ತದೆ ಎನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ. ಅದನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಆ ಕಾಮಗಾರಿಯನ್ನು ನಿರ್ವಹಿಸುವಂತಹ ಕೆಲಸವನ್ನು ಮಾಡುತ್ತೇನೆ.